ಕತೆ, ಕಾದಂಬರಿಗಳನ್ನು ಓದಿ ಅದನ್ನು ಬಿಟ್ಟು ಚರಿತ್ರೆಯ ಕೋರ್ಸ್ ಸೇರಿಕೊಂಡೆ' ಎಂದು ಒಬ್ಬ ಹರೆಯದ ಹುಡುಗಿ ಕರೆಮಾಡಿ ತಿಳಿಸಿದಾಗ,

- ನನ್ನ ನಾಲ್ಕು ಕತೆಗಳನ್ನು ಹವ್ಯಾಸಿ ಸಂಘಗಳು ನಾಟಕ ರೂಪದಲ್ಲಿ ತಂದಿದ್ದರೂ, ಹೆಚ್ಚಿನ ಸಂತೋಷವಾದದ್ದು, ಒಂದು ಪ್ರೌಢ ಶಾಲೆಯ ಹೆಣ್ಣುಮಕ್ಕಳ ಗುಂಪು 'ಪದ್ಮಪಾಣಿ'ಯನ್ನು ನಾಟಕರೂಪದಲ್ಲಿ ತಂದಾಗ.

ಇಂತಹ ಹಲವು ಘಟನೆಗಳಿಂದಾಗಿ ನನ್ನ ಬರಹಗಳು ಕತೆ ಹೇಳುವುದಕ್ಕೂ ಮಿಗಿಲಾಗಿ ಯುವಕರಲ್ಲಿ ವಿವಿಧ ರೀತಿಯ ಆಸಕ್ತಿ, ಕುತೂಹಲ ಮೂಡಿಸಿವೆ ಎಂಬ ಸಂಗತಿ ಅತೀವ ಖುಷಿ ಕೊಟ್ಟಿದೆ. ಅಲ್ಲದೆ ಸಾಹಿತ್ಯಕ್ಕೆ ನಾವು ಕಲ್ಪಿಸಿಕೊಳ್ಳುವುದಕ್ಕೂ ಮಿಗಿಲಾದ ವಿಸ್ತಾರ, ಶಕ್ತಿ ಇದೆ ಎಂಬ ಅರಿವು ನನ್ನಲ್ಲಿ ಇನ್ನಷ್ಟು ಜವಾಬ್ದಾರಿಯನ್ನು ಹುಟ್ಟು ಹಾಕಿದೆ. ಇನ್ನು, ಕತೆ ಕಾದಂಬರಿಗಳಿಗಾಗಿ ಕೈಗೊಂಡ ಪ್ರವಾಸಗಳಲ್ಲಿ, ಮಾಹಿತಿ ಕಲೆಹಾಕುವ ಪ್ರಯತ್ನದಲ್ಲಿ, ನಾ ಪಡೆದ ಅನುಭವಗಳು ನನಗೆ ದಕ್ಕಿದ ಅಪೂರ್ವ ಆಸ್ತಿಯೆಂದೆ ನಂಬುತ್ತೇನೆ. ಈ ಬಗ್ಗೆ ಕೆಲವು ಕಾದಂಬರಿಗಳ ಕೊನೆಯಲ್ಲಿ ಬರೆದಿದ್ದೇನೆ ಕೂಡ. ಚರಿತ್ರೆಯ ವಿವರಗಳನ್ನು ಕಲೆಹಾಕುವಾಗ ಕಂಡುಕೊಂಡ ಆಶ್ಚರ್ಯಕರ, ವಿಷಯಗಳಂತೂ ನನ್ನನ್ನು ಮೂಕವಿಸ್ಮಯಗೊಳಿಸಿವೆ. ದುರದೃಷ್ಟವೆಂದರೆ ಅಂತಹ ನೂರಾರು, ಸಾವಿರಾರು ವಿವರಗಳಲ್ಲಿ ಕೆಲವನ್ನು ಮಾತ್ರ ಕೃತಿಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆ ಅಷ್ಟೆ. ಅಳವಡಿಸಿಕೊಳ್ಳಲಾಗದೆ, ನನ್ನಲ್ಲಿಯೇ ಉಳಿದ ಎಷ್ಟೋ ವಿವರಗಳು ಅಷ್ಟೆ ಕುತೂಹಲಕರವಾಗಿದ್ದರೂ, ಓದುಗರೊಂದಿಗೆ ಅವನ್ನು ಹಂಚಿಕೊಳ್ಳಲು ಸಾಧ್ಯವಾಗಲಿಲ್ಲವೆಂಬ ಕೊರಗು ಸದಾ ಕಾಡುತ್ತದೆ.

### ಕತೆಗಳ ಕಾರಣ

ಕೆಲವು ಸಾಹಿತ್ಯಾಸಕ್ತರು ನಾನು ಕಾದಂಬರಿಗಳಲ್ಲಿನ ಪಾತ್ರಗಳಿಗೆ ಜೀವ ತುಂಬಿರುವುದಿಲ್ಲ, ಹಾಗೂ ನನ್ನ ಕಥಾಪ್ರಕಾರದಲ್ಲಿ 'ಏಕತಾನತೆ' ನುಸುಳುತ್ತಲಿದೆ, ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಒಂದು ಅವಲೋಕನೆ:

ತನ್ನ ಕೃತಿಗಳನ್ನು ಎಲ್ಲರೂ ಓದಿ ಮೆಚ್ಚಿಕೊಳ್ಳಬೇಕು ಎಂಬ ಅಲಿಖಿತ ಇಚ್ಛೆಯ ಜೊತೆಗೆ, ಮೂರು ವಿಭಿನ್ನ ಕಾರಣಗಳಿಂದಲೂ ಕತೆಗಾರ ಬರೆಯುತ್ತಾನೆ ಎನ್ನುವುದು ನನ್ನ ಅಭಿಮತ:

ತಾನು ಕಂಡುಕೊಂಡಿರಬಹುದಾದ ವಸ್ತುವಿಷಯಗಳನ್ನು ಓದುಗರಿಗೆ ಮುಟ್ಟಿಸುವ ಉದ್ದೇಶದಿಂದ (**Message and matter**),

ಆ ವಸ್ತುವಿಷಯವನ್ನು ಓದುಗರಿಗೆ ಮುಟ್ಟಿಸಲು ತಾನು ಹೆಣೆದಿರುವ ಕಥಾಹಂದರವನ್ನು, ಆ ಮೂಲಕ ತನ್ನ ಸೃಜನಶೀಲತೆಯನ್ನೂ ಓದುಗರ ಮುಂದೆ ಪರೀಕ್ಷೆಗೆ ಒಡ್ಡುವ ಉದ್ದೇಶದಿಂದ (**Creativity**),

ತನ್ನ ಸಾಹಿತ್ಯದ ಕಲಾತ್ಮಕತೆಯನ್ನು ಹಾಗೂ ಭಾಷೆಯನ್ನು ಬಳಸುವಲ್ಲಿ ತನ್ನ ಕೃಷಿಕತೆಯನ್ನೂ ಓದುಗರ ಆಸ್ವಾದನೆಗೆ ತೆರೆದಿಡುವ ಉದ್ದೇಶದಿಂದ (**Literary and language skill**).

ಕಥಾರಚನೆಯಲ್ಲಿ ಇವು ಮೂರೂ ಮುಖ್ಯವೇ ಆದರೂ, ಪ್ರತಿ ಕತೆಗಾರನೂ ತನ್ನದೆ ವಿಶಿಷ್ಟ ರೀತಿಯಲ್ಲಿ ಆ ಮೂರೂ ಅಂಶಗಳನ್ನು ಅಳವಡಿಸಿಕೊಳ್ಳುತ್ತಾನೆ. ಕೆಲವರು ತಮ್ಮ ವಸ್ತುವಿನಿಂದ ಹೆಚ್ಚಾಗಿ ಓದುಗರನ್ನು ಮುಟ್ಟಿದರೆ ಕೆಲವರು ಕಲಾತ್ಮಕತೆಯಿಂದ ಅಥವ ಸೃಜನಶೀಲವಾದ ಕಥಾ ಹಂದರದಿಂದ ಆಕರ್ಷಿಸುತ್ತಾರೆ. ಹಾಗೆಯೇ ಕೆಲವರ ಕೃತಿಗಳಲ್ಲಿ ಭಾಷಾಪ್ರಯೋಗವೇ ಹೆಚ್ಚು ಮುಖ್ಯವಾಗಿ ಕಾಣಬಹುದು.